ಪಶ್ಚಾತ್ತಾಪ ಪಡದೆ ಬಿಡುವುದು ಸಂಭವವಿಲ್ಲ. ಇಲ್ಲಿ ನನಗೆ ಅನೇಕ ಆಪ್ತಮಿತ್ರರಿದ್ದರು. ಶಾಲೆಯಲ್ಲಿ ನೌಕರಿಯಿತ್ತು. ಎಲ್ಲದಕ್ಕಿಂತ ಹೆಚ್ಚೆಂದರೆ, ನನ್ನ ಸಲಹೆಗಾರ್ತಿಯರಾಗಿದ್ದ ಮತ್ತು ನನಗೆ ಹಿತೈಷಿಗಳಾಗಿದ್ದ ಮೌರೀನ್ ಇಲ್ಲಿದ್ದರು. ಹೊಸ ಮಾರ್ಗದಲ್ಲಿ ಏನನ್ನು ನೋಡಬೇಕಿದೆಯೋ ತಿಳಿದಿಲ್ಲ. ಆದರೂ ನಾನು ಇಲ್ಲಿಂದ ದೂರ ಹೋಗುವಲ್ಲಿ ಖುಷಿಗೊಂಡಿದ್ದೆ. ಅಬ್ರಾಹಮ್‌ನ ದುರಾಚಾರ ನನ್ನ ಬದುಕಿನಲ್ಲಿ ತೀವ್ರ ಕಹಿಯನ್ನು ತಿನ್ನಿಸಿತ್ತು; ಅವನನ್ನು ತ್ಯಜಿಸುವುದಕ್ಕಾಗಿ ಯಾವುದೇ ಬೆಲೆಯನ್ನು ತೆರಲು ಸಿದ್ಧಳಿದ್ದೆ.

ಕೀನ್ಯಾದಿಂದ ನನ್ನ ಸರ್ವಸ್ವವೂ ಕಳಚಿಕೊಂಡಿತ್ತು. ನನ್ನ ಇಲ್ಲಿಯ ಕಥೆ ಮುಕ್ತಾಯವಾಯಿತು. ನೌಕರಿಗೆ ರಾಜೀನಾಮೆಯನ್ನು ಕೊಟ್ಟೆ, ಕೆಲವು ಸಾಮಾನುಗಳನ್ನು ಮಾರಿದೆ, ಕೆಲವನ್ನು ಪ್ಯಾಕ್ ಮಾಡಿದೆ. ಮಿತ್ರರು ಮತ್ತು ಸಹೋದ್ಯೋಗಿಗಳನ್ನು ಭೇಟಿಯಾದೆ, ಅವರಿಗೆ ಬೈ ಬೈ ಹೇಳಿದೆ. ಕೀನ್ಯಾ ಬಿಡುವಾಗ ಮನಸ್ಸು ಭಾವಾವೇಗಕ್ಕೆ ಒಳಗಾಯಿತು, ಕಣ್ಣೀರು ಉಕ್ಕಿ ಬಂತು. ನಾನು ಮಗನನ್ನು ಕರೆದುಕೊಂಡು, ಲಾರ್ಸ್‌ನ ದೇಶ ಡೆನ್ಮಾರ್ಕ್‌ಗೆ ಬಂದೆ; ಆಫ್ರಿಕಾದಿಂದ ಯೂರೋಪಿಗೆ ಬಂದೆ.

## ಡೆನ್ಮಾರ್ಕ್ (ಯೂರೋಪ್)

ಬಾಲ್ಯದಲ್ಲಿ ನಾನು ಮಲಪ್ಪುರಮ್‌ನಲ್ಲಿದ್ದಾಗ, ನಾನು ರಾಜಧಾನಿ ದಿಲ್ಲಿಗೆ ಹೋಗುವುದು ಸಹ ದೊಡ್ಡ ಸಂಗತಿಯಾಗುತ್ತಿತ್ತು. ಯೂರೋಪಿಗೆ ಹೋಗಿ, ಅಲ್ಲೊಬ್ಬ ಬಿಳಿಯವನ ಧರ್ಮಪತ್ನಿಯಾಗಿ ಜೀವನ ಸಾಗಿಸುವುದನ್ನು ಕನಸಿನಲ್ಲೂ ಯೋಚಿಸಿರಲಿಲ್ಲ. ಇತಿಹಾಸದ ಕಾಲಖಂಡದಲ್ಲಿ ನಾನಾ ವಿಧದ ವಿದೇಶ ವಾಸಗಳು ಕಲೆತಿವೆ: ಅನ್ವೇಷಣೆಯ ಅರಿವಿಗಾಗಿ ಅಥವಾ ಸಂಪನ್ಮೂಲಗಳ ಶೋಧನೆಗಾಗಿ, ಧರ್ಮ ಪ್ರಚಾರಕ್ಕಾಗಿ, ರಕ್ಷಣೆಗಾಗಿ, ಉದ್ಯೋಗಕ್ಕಾಗಿ, ಶೈಕ್ಷಣಿಕ ಉದ್ದೇಶಕ್ಕಾಗಿ ವಿದೇಶದಲ್ಲಿ ನೆಲಸಲಾಗುತ್ತದೆ. ‘ಸ್ಪೌಸ್ ಮೈಗ್ರೇಶನ್’ ಸಹ ನಡೆಯುತ್ತದೆ.

‘ನಾನೂ ಸಹ ಇಲ್ಲಿಗೆ ಹೆಂಡತಿಯಿಂದಾಗಿ ಬಂದಿದ್ದೆ,’ – ಪಾಲ್ ತಕ್ಷಣ ಹೇಳಿದ, ‘ಅವಳಿಗಾಗಿ ನನ್ನ ಮನೆ, ಪರಿವಾರ, ನೌಕರಿ, ದೇಶ, ಪಿತ್ರಾರ್ಜಿತ ಆಸ್ತಿ ಎಲ್ಲವನ್ನೂ ತ್ಯಜಿಸಿದೆ. ಆದರೂ ಅವಳ ಪ್ರೇಮದ ಪರಿಭಾಷೆಯಲ್ಲಿ ಪೂರ್ಣವಾಗಿ ಹೊಂದಿಕೊಳ್ಳದಾದೆ...’

ಪಾಲ್ ಬಡಬಡಿಸುವುದನ್ನು ಕೇಳಿ ನನ್ನ ಮಾತನ್ನು ನಿಲ್ಲಿಸಿ, ಮನನ ಮಾಡಿದೆ; ಪಾಲ್‌ನ ಮನಸ್ಸಿನಲ್ಲೂ ತುಂಬಾ ಸಂಗತಿಗಳು ತುರುಕಿಕೊಂಡಿವೆ... ಅವನ ವ್ಯಥೆ ನನಗಿಂತ ಹೆಚ್ಚಿಲ್ಲ ತಾನೇ!

‘ಏಕೆ ಮೌನಿಯಾದಿರಿ? ಮುಂದುವರೆಸಿ...’ ಪಾಲ್‌ನ ಕಳವಳದ ಸ್ವರವನ್ನು ಕೇಳಿ ಹಿಂದಕ್ಕೆ ಬಂದೆ.

ಹೌದು... ವಿದೇಶ ವಾಸ ಮತ್ತು ಸ್ಥಾನಪಲ್ಲಟದ ಪ್ರಕ್ರಿಯೆಯಲ್ಲಿ ಏನನ್ನು ಕಳೆದುಕೊಂಡೆ, ಏನನ್ನು ಪಡೆದೆ, ಏನನ್ನು ಅನುಭವಿಸಿದೆ, ಏನನ್ನು ಸಹಿಸಿದೆ ಎಂಬುದನ್ನು ವರ್ಣಿಸಲು ಆರಂಭಿಸಿದರೆ, ಒಂದು ಮಹಾಕಾವ್ಯವೂ ಸಾಲದಾಗುತ್ತದೆ. ಪ್ರಸ್ತುತ ಆಫ್ರಿಕಾದಿಂದ ಯೂರೋಪಿಗೆ ಬಂದು, ಎರಡು ಮಹಾದ್ವೀಪಗಳಲ್ಲಿ ಮಾನವನ ಜೀವನದ ಬಗ್ಗೆ ಹೋಲಿಕೆ ಮಾಡುವುದು ಅವಶ್ಯವಂತೂ ಆಗಿತ್ತು.

ಕೀನ್ಯಾದಲ್ಲಿನ ವಾತಾವರಣ ಭಾರತದಂತಿತ್ತು. ಅಲ್ಲಿ ಎಲ್ಲರೂ ನಮ್ಮವರೆಂದು ಅನ್ನಿಸುತ್ತಿತ್ತು. ಭಾರತ ಮತ್ತು ಕೀನ್ಯಾ ಎರಡೂ ದೇಶಗಳು ದೀರ್ಘ ಅವಧಿಯವರೆಗೆ ಯೂರೋಪಿನ ವಸಾಹತುವಾಗಿದ್ದವು. ಬಡತನ, ನಿರಕ್ಷರತೆ, ನಿರುದ್ಯೋಗ ಮುಂತಾದ ವಿಷಯಗಳ ಬಗ್ಗೆ ಎರಡೂ ದೇಶಗಳ ಸಂಘರ್ಷ ಒಂದೇ ತೆರನಾಗಿದ್ದವು. ಕೀನ್ಯಾ ನನಗೆ ಒಂದು ಪ್ರತ್ಯೇಕ ದೇಶವಾಗಿದ್ದಾಗ್ಯೂ, ಅಲ್ಲಿದ್ದ ಭಾರತೀಯತೆ ಮತ್ತು ಆತ್ಮೀಯತೆಯಿಂದಾಗಿ ನಾನು ಚಕಿತಳಾಗಿದ್ದೆ. ಅಲ್ಲಿಯ ಜನರ ಸ್ನೇಹದಿಂದಾಗಿ, ಅದು ನನಗೆ ಪರದೇಶ ಎಂದು ಅನ್ನಿಸದೆ, ನನ್ನ ಮನೆಯೆಂದೇ ಕಂಡಿತು.

ಯೂರೋಪ್‌ನ ವಿಷಯ ಬೇರೆಯದಾಗಿತ್ತು. ಏಳು ಮಹಾದ್ವೀಪಗಳಲ್ಲಿ ಜಗತ್ತಿನ ಒಂದು ಚಿಕ್ಕ, ಆದರೆ ಸಮೃದ್ಧ ಮಹಾದ್ವೀಪವಾಗಿತ್ತು. ಡೆನ್ಮಾರ್ಕ್ ಯೂರೋಪಿನ ಐವತ್ತು ದೇಶಗಳಲ್ಲಿ ಒಂದು ಚಿಕ್ಕ ಮತ್ತು ಶ್ರೀಮಂತ ದೇಶವೆಂದು ಹೆಸರುವಾಸಿಯಾಗಿದೆ. ನಾರ್ವೆ ಮತ್ತು ಸ್ವೀಡನ್‌ನೊಂದಿಗೆ ಕಲೆತು ಇದನ್ನು ಸಾಂಸ್ಕೃತಿಕ ಸ್ಕಾಂಡಿನೇವಿಯನ್ನಾಗಿಸುತ್ತದೆ. ಇಲ್ಲಿಯ ಎಲ್ಲಾ ದೇಶಗಳಲ್ಲಿ, ಇಲ್ಲಿಯ ನಿವಾಸಿಗಳು ಸ್ವತಂತ್ರವಾಗಿ ಬಂದು ಹೋಗಬಹುದು; ಇದು ಈ ದ್ವೀಪದ ವಿಶೇಷತೆಯಾಗಿದ್ದು, ಇದು ನನಗೆ ತುಂಬಾ ಇಷ್ಟವಾಯಿತು. ಈ ದೇಶಗಳ ನಡುವೆಯೂ ಯುದ್ಧಗಳು ನಡೆದಿದ್ದವು, ಕಹಿ ಭಾವನೆಯೂ ಬೆಳೆದಿತ್ತು. ಆದರೆ ಇಂದು ಇವರು ವೈಮನಸ್ಸಿನಿಂದ ಹೊರ ಬಂದು ಪರಸ್ಪರ ಸೌಹಾರ್ದತೆಯ ವಾತಾವರಣವನ್ನು ನಿರ್ಮಿಸಿದ್ದಾರೆ. ಯೂರೋಪಿನ ದೇಶಗಳ ಆಡಳಿತಾತ್ಮಕ ಪಾಲುಗಾರಿಕೆಯನ್ನು ನೋಡಿ ನಾನು ತುಂಬಾ ಪ್ರಭಾವಿತಳಾದೆ.

ಪ್ರಸ್ತುತ ನನ್ನ ವೈವಾಹಿಕ ಜೀವನ ಇಲ್ಲಿ ಅದೆಷ್ಟು ಶಾಂತಿಯುತವಾಗಿ ಮತ್ತು ಸಮೃದ್ಧವಾಗಿರುವುದು ಎಂಬ ಮುಖ್ಯ ಪ್ರಶ್ನೆ ಈಗ ನನ್ನೆದುರಿಗಿತ್ತು. ನನ್ನ ಜೀವನ, ಪರಿಸ್ಥಿತಿಗಳು ಮತ್ತು ನನ್ನ ಪ್ರಯತ್ನಗಳು ನನ್ನೆದುರು ಹೊಸ ಪ್ರಶ್ನೆಯಾಗಿದ್ದವು. ನನ್ನ ಜೀವನ ಮತ್ತೊಮ್ಮೆ ಬದಲಾಗಿತ್ತು, ಅದು ಹೊಸ ರೀತಿಯಲ್ಲಿ ಸಾಗಲಾರಂಭಿಸಿತ್ತು. ನನ್ನ ಸಾಂಸ್ಕೃತಿಕ ಹಿನ್ನಲೆ ಮತ್ತು ಸ್ವಚ್ಛಂದ ಡ್ಯಾನಿಶ್ ಜೀವನಶೈಲಿಯ ನಡುವೆ ಜೀವನವನ್ನು ಸಾಗಿಸುವುದು ಸುಲಭವಾಗಿರಲಿಲ್ಲ. ಯೂರೋಪಿನಲ್ಲಿ ಗಂಡು ಮತ್ತು ಹೆಣ್ಣು ವಿವಾಹವಿಲ್ಲದೆ ಜೊತೆಯಲ್ಲಿರುವುದು ಸಾಮಾನ್ಯವಾಗಿದೆ. ಆದರೆ ನನ್ನ ಪಾರಿವಾರಿಕ ಸಂಸ್ಕಾರಗಳು ಇದಕ್ಕೆ ಅಡ್ಡಿಯಾಗುತ್ತವೆ. ನಾನು ಲಾರ್ಸ್‌ಗೆ, ‘ವಿವಾಹವಾಗದೆ ಜೊತೆಯಲ್ಲಿರುವುದು ನನಗಿಷ್ಟವಿಲ್ಲ, ನಾನು ನನ್ನ ಸಂಬಂಧಕ್ಕೆ ಒಂದು ಗಟ್ಟಿ ಆಧಾರವನ್ನು ಬಯಸುತ್ತೇನೆ’ ಎಂದೆ. ಲಾರ್ಸ್ ಮದುವೆಗೆ ಒಪ್ಪಿದ. ಕೋಪನ್‌ಹೇಗನ್ ತಲುಪಿದ ಒಂದು ತಿಂಗಳ ನಂತರ, ನಮ್ಮ ವಿವಾಹ ಒಂದು ಸರಳ ಸಮಾರಂಭದಲ್ಲಿ, ಆಯ್ದ ಜನರ ನಡುವೆ ನೆರವೇರಿತು. ಲಾರ್ಸ್‌ನ ತಂದೆ–ತಾಯಿ, ಅಜ್ಜಿ, ಮಾವ ಮತ್ತು ಅವನ ಬಿಜಿನೆಸ್ ಪಾರ್ಟನರ್ ಆಗಿದ್ದ ಇಬ್ಬರು ಸ್ನೇಹಿತರು ವಿವಾಹದಲ್ಲಿ ಭಾಗವಹಿಸಿದರು. ನನ್ನ ಕಡೆಯಿಂದ ನನ್ನ ಜೋಶುಆ ಮತ್ತು ಏಳು ಜನರ ಉಪಸ್ಥಿತಿಯಲ್ಲಿ ನಮ್ಮ ವಿವಾಹ ನೆರವೇರಿತು. ಬಿಳಿ ಚರ್ಮದ, ಖಾಕಿ–ಸುವರ್ಣ ಕೂದಲು ಮತ್ತು ನೀಲಿ–ಹಸುರು ಕಣ್ಣುಗಳ ಈ ಜನರ ನಡುವೆ ನಾನು ಮತ್ತು ಜೋಶುಆ ಪ್ರತ್ಯೇಕವಾಗಿ ಕಾಣಬರುತ್ತಿದ್ದೆವು. ಈ ಬಾರಿ ನನ್ನ ವಧುವಿನ ಎರಡನೆಯ ಅವತಾರವಾಗಿತ್ತು. ಸೀರೆ ಬದಲು ಬಿಳಿ ಗೌನ್ ಧರಿಸಿದೆ. ತಲೆಗೆ ಬಿಳಿಯ ಪಾರದರ್ಶಕ ಮುಸುಕು ಮತ್ತು ಕೈಗಳಲ್ಲಿ ಗುಲಾಬಿಯನ್ನು ಹಿಡಿದಿದ್ದೆ.

ನಾನು ಮಿಸೆಸ್ ಹೈನಸನ್ ಅಂದರೆ ನ್ಯಾನ್ಸಿ ಹೈನಸನ್ ಆದೆ. ಇಲ್ಲಿ ಎಲ್ಲವೂ ಅಂದರೆ ಮನೆ, ಪರಿಸರ ಮತ್ತು ಸರ್‌ನೇಮ್ ಹೊಸದಾಗಿದ್ದು, ಅಪರಿಚಿತವಾಗಿದ್ದವು. ಮಾಜಿ ಪತಿ ಅಬ್ರಾಹಮ್‌ನೊಂದಿಗೆ ವಿಶಾಲ ಮತ್ತು ಸಡಗರದ ಮನೆಯಲ್ಲಿದ್ದೆ. ಡೆನ್ಮಾರ್ಕ್‌ಗೆ ಬಂದು ನನ್ನ ಹೊಸ ಪತಿಯೊಂದಿಗೆ ಒಂದು ಚಿಕ್ಕ ಮತ್ತು ಸಂಕೀರ್ಣ ಫ್ಲಾಟ್‌ನಲ್ಲಿದ್ದೆ. ಇಲ್ಲಿ ಅಡುಗೆ ಮನೆ, ಬಾತ್‌ರೂಮ್, ಒಂದು ವರಾಂಡ, ಒಂದು ಬೆಡ್ ರೂಮ್ ಹಾಗೂ ಒಂದು ಚಿಕ್ಕ ಆಫೀಸ್ ರೂಮಿತ್ತು. ಲಾರ್ಸ್ ತನ್ನ ಬಿಜಿನೆಸ್‌ನ ಕೆಲಸಗಳನ್ನು ಹೆಚ್ಚಾಗಿ ಮನೆಯಿಂದಲೇ ಮಾಡುತ್ತಿದ್ದ, ಅಂದರೆ ವರ್ಕ್ ಫ್ರಮ್ ಹೋಮ್. ನಾನು ಅವನ ಧೈರ್ಯವನ್ನು ನೋಡಿ ಸಂತಸಪಟ್ಟಿದ್ದೆ, ಏಕೆಂದರೆ ಅವನು ತನ್ನ ಆಫೀಸ್ ರೂಮನ್ನು ನನ್ನ ಜೋಶುಆಗೆ ಬಿಟ್ಟು ಕೊಟ್ಟಿದ್ದ. ಜೋಶುಆಗೆ ತನ್ನದೇ ಆದ ಒಂದು ಕೊಠಡಿ ಲಭಿಸಿತು. ಡ್ರಾಯಿಂಗ್ ರೂಮಿನ ಒಂದು ಭಾಗ ಲಾರ್ಸ್‌ನ ಆಫೀಸ್ ಆಗಿ ಮಾರ್ಪಟ್ಟಿತು. ಕಿಚನ್‌ನಲ್ಲಿಯೇ ಡೈನಿಂಗ್ ಟೇಬಲ್ ಇಡಲಾಯಿತು. ದಿನಗಳು ಕಳೆಯುತ್ತಿದ್ದವು.

ಇಲ್ಲೂ ಸಹ ಅಲೋವೆರಾದ ಅನೇಕ ಪ್ರಜಾತಿಗಳು ಸಿಗುತ್ತಿದ್ದವು. ನಾನು ಆಫ್ರಿಕಾದಿಂದ ಸಹ ನನ್ನೊಂದಿಗೆ ಒಂದು ಅಲೋವೆರಾದ ಗಿಡವನ್ನು ತಂದಿದ್ದೆ. ಇದಕ್ಕಾಗಿ ನಾನು ಏರ್‌ಲೈನಿನಿಂದ ವಿಶೇಷ ಅನುಮತಿಯನ್ನು ಪಡೆಯಬೇಕಾಯಿತು. ಲಾರ್ಸ್‌ಗೆ ಮರಗಿಡಗಳ ಬಗ್ಗೆ ಸುತರಾಂ ಆಸಕ್ತಿಯಿರಲಿಲ್ಲ. ಕಾರ್ ರೇಸಿಂಗ್, ಫುಟ್ಬಾಲ್ ಮ್ಯಾಚ್ ನೋಡುವುದು ಅವನ ಹವ್ಯಾಸವಾಗಿತ್ತು. ಅಲೋವೆರಾ ನನ್ನ ಪರಮಮಿತ್ರ ಗಿಡವಾಗಿತ್ತು. ಎಲ್ಲೇ ಹೋದರೂ ಅಲೋವೆರಾವನ್ನು ಬೆಳೆಸುತ್ತಿದ್ದೆ, ಅದಕ್ಕೆ ಮೊದಲ ಆದ್ಯತೆಯನ್ನು ಕೊಡುತ್ತಿದ್ದೆ. ಆದರೆ ಅಲೋವೆರಾ ಥಂಡಿಯನ್ನು ಸಹಿಸಲ್ಲ. ಹೀಗಾಗಿ ನಾನು ಮನೆಯೊಳಗೆ ಗಿಡದ ತೊಟ್ಟಿಗಳಲ್ಲಿ ಮೋಮ್ಬಾಸದಿಂದ ತಂದ ಅಲೋವೆರಾ ಗಿಡಗಳನ್ನು ಹಾಕಿದೆ. ಡೆನ್ಮಾರ್ಕ್‌ನಲ್ಲಿ ಸಿಗುವ ಕೆಲವು ಪ್ರಜಾತಿಗಳನ್ನು ಸಹ ಬೆಳೆದೆ. ನನ್ನ ಚಿಕ್ಕ ಮನೆಯ ಸುತ್ತಮುತ್ತ ಅಲೋವೆರಾ ಕೈತೋಟವನ್ನು ಅರಳಿಸಿದೆ. ಸೂರ್ಯನ ಕಡಿಮೆ ಬೆಳಕಿನಲ್ಲೂ ಇದು ಬೆಳಕನ್ನು ಸಂಗ್ರಹಿಸುತ್ತದೆ. ನಾನು ಕೈತೋಟದ ಉಸ್ತುವಾರಿ ಮಾಡುತ್ತಿದ್ದೆ.

ಇಲ್ಲೂ ಸಹ ನಮ್ಮ ಇಂಡಿಯನ್